## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **606 (615)** |
| ಸದಸ್ಯರ ಹೆಸರು | : | ಶ್ರೀ. ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.09.2022 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿನ ವಸತಿ ಶಾಲೆಗಳಲ್ಲಿ ಪ್ರೌಢಶಾಲಾ ಹಿಂದಿ ಸಹ ಶಿಕ್ಷಕರ ನೇಮಕಾತಿಗೆ ನಿಗಧಿಪಡಿಸಿದರೆ ನೇಮಕಾತಿ ನಿಯಮಗಳನ್ನು ಶಿಕ್ಷಣ ಇಲಾಖೆ ಅಳವಡಿಸಿಕೊಳ್ಳದಿರಲು ಕಾರಣಗಳೇನು; | ಶ್ರೀ ಶಿವಾನಂದ ಬಿ ನಾಗೂರು ಮತ್ತು ಇತರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠ, ಇಲ್ಲಿ ದಾಖಲಾದ ರಿಟ್ ಅರ್ಜಿ ಸಂಖ್ಯೆ:2772/2011 ಮತ್ತು 69822-69826/2012ರ (ಎಸ್.ಕೆ.ಎ.ಟಿ) ಪ್ರಕರಣದಲ್ಲಿ ಮಾನ್ಯ ದ್ವಿ.ಸದಸ್ಯ ಪೀಠದ ನ್ಯಾಯಾಲಯವು ದಿನಾಂಕ:30.07.2015ರಂದು ನೀಡಿರುವ ತೀರ್ಪಿನಲ್ಲಿ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು 2002ರ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಸರ್ಕಾರಿ ಪ್ರೌಢ ಭಾಷಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ, ತತ್ಸಮಾನ ವಿದ್ಯಾರ್ಹತೆಗಳೆಂದು ಹೊರಡಿಸಿರುವ ಕೆಲವು ಆದೇಶಗಳು N.C.T.E (National Council for Teacher Education) ನಿರ್ದಿಷ್ಟಪಡಿಸಿರುವ ವಿದ್ಯಾರ್ಹತೆಗಿಂತ ಕಡಿಮೆ ಇರುವ ಕಾರಣ 2002ರ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ರದ್ದುಪಡಿಸಲಾಗಿರುತ್ತದೆ.<br><br>ರಾಜ್ಯ ಸರ್ಕಾರವು ಹಿಂದಿ ಭಾಷಾ ಶಿಕ್ಷಕರ ನೇಮಕಾತಿಗೆ ಬಿ.ಎ ಮತ್ತು ಬಿಎಡ್ ವಿದ್ಯಾರ್ಹತೆಗೆ ತತ್ಸಮಾನವೆಂದು ಪರಿಗಣಿಸಿ ಹೊರಡಿಸಿರುವ ಆದೇಶಗಳಲ್ಲಿನ ವಿದ್ಯಾರ್ಹತೆಯಾದ ಬಿ.ಎ ಮತ್ತು ಬಿಎಡ್‌ನ್ನು ಎನ್‌ಸಿಟಿಇಯು ಮಾನ್ಯ ಮಾಡಿರುವುದಿಲ್ಲ. ಆದ್ದರಿಂದ ತತ್ಸಮಾನ ವಿದ್ಯಾರ್ಹತೆಗಳೆಂದು ಪರಿಗಣಿಸಿ ಹೊರಡಿಸಲಾದ ಆದೇಶಗಳನ್ನು ರದ್ದುಪಡಿಸಲಾಗಿರುತ್ತದೆ.<br><br>ಪ್ರೌಢಶಾಲಾ ಹಿಂದಿ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ, ತತ್ಸಮಾನ ವಿದ್ಯಾರ್ಹತೆ ಕುರಿತು ಎನ್‌ಸಿಟಿಇ (National Council for Teacher Education) ರವರ ಅಭಿಪ್ರಾಯ ಪಡೆದು ಧೃಡಪಡಿಸಿಕೊಂಡು ಸರ್ಕಾರವು 2016ರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿರುತ್ತದೆ. |

| | | |
|---|---|---|
| | | ಸರ್ಕಾರವು ಮಾನ್ಯ ನ್ಯಾಯಾಲಯದ ತೀರ್ಪಿನ ಅನುಸಾರ 2016 ರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿರುತ್ತದೆ.<br><br>ಆದ್ದರಿಂದ ಹಿಂದಿ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ತತ್ಸಮಾನ ವಿದ್ಯಾರ್ಹತೆಯನ್ನು ನೇಮಕಾತಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ. |
| ಆ | ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯಿಂದ ಸಮಾನಾಂತರ ಬಿ.ಎ, ಬಿಎಡ್ ಪದವಿ ಹೊಂದಿದ ಅಭ್ಯರ್ಥಿಗಳನ್ನು ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆಗಳಿಗೆ ವಸತಿ ಶಾಲೆಗಳಲ್ಲಿ ನೇಮಕಾತಿ ಮಾಡಿಕೊಂಡು ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಇ | ಹಾಗಿದ್ದಲ್ಲಿ, ರಾಜ್ಯದಲ್ಲಿ ಹಿಂದಿ ಸಹ ಶಿಕ್ಷಕರ ಹುದ್ದೆಗಳ ನೇಮಕಾತಿಗೆ ಏಕರೂಪದ ವಿದ್ಯಾರ್ಹತೆ ನಿಗಧಿಪಡಿಸಲು ಇರುವ ತೊಂದರೆಗಳೇನು; | 2003ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಹಿಂದಿ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ಹೊರಡಿಸಿರುವ ತತ್ಸಮಾನ ವಿದ್ಯಾರ್ಹತೆಯನ್ನು ಪರಿಗಣಿಸಲಾಗುತ್ತಿತ್ತು, ಆದರೆ ಮಾನ್ಯ ಉಚ್ಛ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಸದರಿ ತತ್ಸಮಾನ ವಿದ್ಯಾರ್ಹತೆಯನ್ನು ರದ್ದುಪಡಿಸಿ ಎನ್.ಸಿ.ಟಿ.ಇ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು 2016ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.<br><br>ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯೊಂದಿಗೆ ಸಮಾಲೋಚಿಸಿ ಸೂಕ್ತ ಕ್ರಮ ವಹಿಸಲಾಗುವುದು. |
| ಈ | ಸರ್ಕಾರ ಏಕರೂಪ ವಿದ್ಯಾರ್ಹತೆ ನಿಗಧಿಪಡಿಸಿ, ಆದೇಶ ಯಾವಾಗ ಹೊರಡಿಸಲಾಗುವುದು? | |

ಸಂಖ್ಯೆ:ಇಪಿ 179 ಎಲ್‌ಬಿಪಿ 0000

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು